# ಚಿಣ್ಣರ ಚೇತನ

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ಓ ನನ್ನ ಚೇತನ ಆಗು ನೀ ಅನಿಕೇತನ

ಆಗಸ್ಟ್ 2009


## ಒಂದು ದಿನಕ್ಕೆ ಎಷ್ಟು ಗಂಟೆಗಳು?

ತಿಂಗಳ್ಳ ಬುತ್ತಿ



"ಅಷ್ಟು ಗೊತ್ತಿಲ್ಲವೇ? ಇಪ್ಪತ್ತನಾಲ್ಕು ಗಂಟೆಗಳಲ್ಲವೇ?" ಎಂದು ನಕ್ಕುಬಿಡುವಿರಿ ಅಲ್ಲವೆ. ಆದರೆ ಆಧುನಿಕ ವಿಜ್ಞಾನಿಗಳು ಕರಾರುವಾಕ್ಕಾಗಿ ಲೆಕ್ಕಾಚಾರ ಮಾಡಿ ದಿನಕ್ಕೆ 23 ಗಂಟೆ 56 ನಿಮಿಷ 4.091 ಸೆಕೆಂಡುಗಳು ಎಂದು ತಿಳಿಸಿದ್ದಾರೆ. ಇಂದಿನ ತಂತ್ರಜ್ಞಾನ ಕಾಲದಲ್ಲಿ ಹೀಗೆ ಲೆಕ್ಕ ಮಾಡುವುದು ಕಷ್ಟದ ಕೆಲಸವೇನಲ್ಲ ಆದರೆ 1553 ವರ್ಷಗಳ ಹಿಂದೆ ಭಾರತೀಯ ಖಗೋಲ ವಿಜ್ಞಾನಿಯೊಬ್ಬರು ಕೇವಲ ಮೆದುಳಿನ ಲೆಕ್ಕಾಚಾರದಿಂದ ಒಂದು ದಿನಕ್ಕೆ 23 ಗಂಟೆ 56 ನಿಮಿಷ 4.1 ಸೆಕೆಂಡುಗಳು ಎಂದು ತಿಳಿಸಿದ್ದಾರೆ ಎಂದರೆ ನಮಗೆಷ್ಟು ಆಶ್ಚರ್ಯವಾಗುತ್ತದೆ!

ಇಂತಹ ನಿಖರವಾದ ಲೆಕ್ಕಾಚಾರವನ್ನು ಹದಿನೈದು ಶತಮಾನಗಳ ಹಿಂದೆ ಮಾಡಿದವರ ಹೆಸರು ಆರ್ಯಭಟ! ಕ್ರಿ.ಶ. 476ರಲ್ಲಿ ಭಾರತದಲ್ಲಿ ಜನಿಸಿದ ಆರ್ಯಭಟ ನಳಂದ ವಿಶ್ವವಿದ್ಯಾಲಯದಲ್ಲಿ ಓದಿದರು. 'ಆರ್ಯಭಟೀಯ' ಎಂಬ ಕೃತಿಯನ್ನು ರಚಿಸಿದರು. ನಳಂದ ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದರು. ಅವರ ಹೆಸರನ್ನೇ ಭಾರತದ ಮೊದಲ ಉಪಗ್ರಹಕ್ಕೆ ಇಡಲಾಯಿತು.

ಇಂದಿಗೂ ಪಂಚಾಂಗಗಳನ್ನು ತಯಾರಿಸುವಾಗ 'ಆರ್ಯಭಟ ಸಿದ್ಧಾಂತ'ವನ್ನು ಆಧರಿಸಿಯೇ ಲೆಕ್ಕಾಚಾರ ಮಾಡಲಾಗುತ್ತದೆ. ಬಹು ಆಶ್ಚರ್ಯದ ಸಂಗತಿ ಎಂದರೆ ಜುಲೈ ತಿಂಗಳ 21ರಂದು ಖಗ್ರಾಸ ಸೂರ್ಯಗ್ರಹಣ ವೀಕ್ಷಿಸಲು ಬಿಹಾರದ ತಾರಾಗಣ ಎಂಬ ಊರಿನಲ್ಲಿ ವೀಕ್ಷಣಾಲಯ ಸ್ಥಾಪಿಸಿದ್ದರು. ಅಚ್ಚರಿಯೆಂದರೇ ಖಗೋಲಶಾಸ್ತ್ರಜ್ಞ ಆರ್ಯಭಟ ಇದೇ ಊರಿನಲ್ಲಿ ವೀಕ್ಷಣಾಲಯ ನಿರ್ಮಾಣ ಮಾಡಿದ್ದರು. ಈಗಲೂ ಈ ವೀಕ್ಷಣಾಲಯದ ಅವಶೇಷಗಳು ಇಲ್ಲಿವೆ. ನೋಡಿದಿರಾ, ನಮ್ಮ ಪೂರ್ವಜರು ಎಷ್ಟು ಬುದ್ಧಿವಂತರಾಗಿದ್ದರು!

## ಪ್ರೀತಿಯ ಚಿಣ್ಣರೇ

ನಿಮಗಾಗಿ ತಯಾರಿಸಿರುವ 'ಚಿಣ್ಣರ ಚೇತನ' ಗೋಡೆ ಪತ್ರಿಕೆಯ ಮೊದಲ ಸಂಚಿಕೆ ಇದು. ಇದು ತಿಂಗಳಿಗೊಮ್ಮೆ ಪ್ರಕಟವಾಗುತ್ತದೆ. ಅನೇಕ ದೊಡ್ಡವರು ನಿಮಗಾಗಿ ಒಳ್ಳೆಯ ವಿಷಯಗಳನ್ನು ಆಯ್ಕೆ ಮಾಡಿಕೊಡುತ್ತಾರೆ.

ವಿಜ್ಞಾನ, ಆರೋಗ್ಯ, ಭಾಷಾಜ್ಞಾನ, ಪ್ರಚಲಿತ ವಿದ್ಯಮಾನಗಳನ್ನು ಒಳಗೊಂಡ ಈ ಪತ್ರಿಕೆಯ ವಿಷಯಗಳನ್ನು ರೂಪಿಸಿದ್ದು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ, ಸರ್ವ ಶಿಕ್ಷಣ ಅಭಿಯಾನ ಹಾಗೂ ಆಟ-ಪಾಠ-ಊಟದ ಮೂಲಕ ಪ್ರಸಿದ್ಧವಾಗಿರುವ 'ಅದಮ್ಯ ಚೇತನ' ಸಂಸ್ಥೆ.

ಈಗ ನಿಮ್ಮಂತೆ ಕರ್ನಾಟಕ ರಾಜ್ಯದ ಸಾವಿರಾರು ಶಾಲೆಗಳ ಲಕ್ಷಾಂತರ ಚಿಣ್ಣರು ಈ ಗೋಡೆಪತ್ರಿಕೆಯನ್ನು ಓದುತ್ತಿದ್ದಾರೆ. ಈ ಪತ್ರಿಕೆಯಲ್ಲಿ ಅನೇಕ ಬಗೆಯ ಕುತೂಹಲದ ವಿಷಯಗಳನ್ನು ತಿಳಿಸಲಾಗುತ್ತದೆ. ಅವು ನಿಮ್ಮ ತಿಳುವಳಿಕೆಯನ್ನು ಹೆಚ್ಚಿಸುತ್ತವೆ. ಪ್ರತಿ ತಿಂಗಳೂ ತಪ್ಪದೆ 'ಚಿಣ್ಣರ ಚೇತನ'ವನ್ನು ಓದುವಿರಿ ತಾನೇ. ಓದಿ, ತಿಳಿದುಕೊಂಡು ಚಿಣ್ಣರ ಚೇತನದ ಪ್ರಶ್ನೆಗಳಿಗೆ ಉತ್ತರಿಸುವಿರಲ್ಲವೆ? ಅಷ್ಟೆ ಅಲ್ಲ. ಪತ್ರಿಕೆಯನ್ನು ಇನ್ನೂ ಸುಂದರ-ಮಾಹಿತಿ ಪೂರ್ಣಗೊಳಿಸಲು ನಿಮ್ಮ ಸಲಹೆ, ಲೇಖನ, ಕವನ, ಚಿತ್ರ, ಒಗಟು ಇತ್ಯಾದಿ ತಪ್ಪದೇ ಕಳುಹಿಸಿ. ಸರಿಯಾದ ಉತ್ತರಗಳಿಗೆ, ಉತ್ತಮ ಚಿತ್ರ/ಲೇಖನಗಳಿಗೆ ಆಕರ್ಷಕವಾದ ಬಹುಮಾನಗಳನ್ನು ನೀಡಲಾಗುವುದು. ಪತ್ರಿಕೆ ಓದಿದ ನಂತರ ಒಂದು ಕಾರ್ಡಿನಲ್ಲಿ ನಿಮ್ಮ ಅಭಿಪ್ರಾಯವನ್ನು ಖಂಡಿತ ತಿಳಿಸಿ. ಮರೆಯದೆ ಬರೆದು ಕಳುಹಿಸಿ.

ನಿಮ್ಮ ಪ್ರೀತಿಯ
'ಚಿಣ್ಣರ ಅಣ್ಣ'

### ಸರ್ವಜ್ಞ ಮತ್ತು ತಿರುವಳ್ಳುವರ್

## ಭಾಷೆ, ಸಂಸ್ಕೃತಿಯ ಸಾಮರಸ್ಯದ ಪ್ರತೀಕ





ಆಗಸ್ಟ್ 9ನೆಯ ತಾರೀಖಿನಂದು ಬೆಂಗಳೂರಿನಲ್ಲಿ ತಿರುವಳ್ಳುವರ್ ಎಂಬ ಸಂತರ ಪ್ರತಿಮೆಯನ್ನು ಅನಾವರಣ ಮಾಡಲಾಯಿತು. ಅವರು ದಾರ್ಶನಿಕರು, ಕವಿಯೂ ಹೌದು. ತಮಿಳುನಾಡಿನ ರಾಜಧಾನಿ ಚೆನ್ನೈನ ಮೈಲಾಪುರಂ ಎಂಬಲ್ಲಿ ಅವರು 2040 ವರ್ಷಗಳ ಹಿಂದೆ ಹುಟ್ಟಿದರು. ಅವರು ರಚಿಸಿದ **ತಿರುಕ್ಕುರಳ್** ಎಂಬ ತಮಿಳು ಗ್ರಂಥ ವೇದಗಳಿಗೆ ಸಮಾನ ಎಂದು ಪರಿಗಣಿಸಲಾಗಿದೆ. 1330 ದ್ವಿಪದಿಗಳುಳ್ಳ ಈ ಗ್ರಂಥ ಮನುಷ್ಯರು ಹೇಗೆ ನೀತಿ ಮಾರ್ಗದಲ್ಲಿ ಬಾಳಬೇಕು ಎಂದು ತಿಳಿಸುತ್ತದೆ.

ಅದೇ ರೀತಿ ಆಗಸ್ಟ್ 13ನೆಯ ತಾರೀಖು ಚೆನ್ನೈನ ಅಯ್ಯಾನವರಂ ಎಂಬಲ್ಲಿ ಇನ್ನೊಂದು ಪ್ರತಿಮೆ ಅನಾವರಣಗೊಂಡಿತು. ಅದು ನಮ್ಮ ಕರ್ನಾಟಕದ ಹೆಮ್ಮೆಯ ಸಂತ ಕವಿ ಸರ್ವಜ್ಞರದು. ಅದನ್ನು ಅನಾವರಣಗೊಳಿಸಿದವರು ಕರ್ನಾಟಕದ ಮುಖ್ಯಮಂತ್ರಿಗಳು.

ನೀವು ಸರ್ವಜ್ಞರ ಹೆಸರನ್ನು, ಹಾಗೂ ಅವರ ತ್ರಿಪದಿಗಳನ್ನು ಕೇಳಿಯೇ ಇರುತ್ತೀರಿ. ಇವರು ಧಾರವಾಡ ಜಿಲ್ಲೆಯಲ್ಲಿ ಹುಟ್ಟಿದ್ದು. 16ನೆಯ ಶತಮಾನದಲ್ಲಿದ್ದ ಈ ಶ್ರೇಷ್ಠ ಜ್ಞಾನಿಗಳು ಸುಮಾರು 2000ಕ್ಕೂ ಹೆಚ್ಚು ತ್ರಿಪದಿಗಳನ್ನು ರಚಿಸಿದ್ದಾರೆ. ಮನುಷ್ಯನ ಬದುಕು ಹೇಗಿರಬೇಕೆಂದು ಸರಳವಾಗಿ ತಿಳಿಸಿದ್ದಾರೆ.

ಸರ್ವಜ್ಞ, ತಿರುವಳ್ಳುವರ್ ಮುಂತಾದ ಲಕ್ಷಾಂತರ ಸಂತರು ನಮ್ಮ ಭಾರತದಲ್ಲಿ ಜನಿಸಿ ಉಪದೇಶ ಮಾಡಿದ್ದಾರೆ. ಅವರ ಮಾತುಗಳು ಇಡೀ ಮಾನವ ಕುಲಕ್ಕೇ ಮಾರ್ಗದರ್ಶಕ. ಅವರು ಯಾವ ಜಾತಿ, ಮತ, ಪಂಥಗಳಿಗೂ ಸೇರಿದವರಲ್ಲ.

**ತಮಿಳುನಾಡು ಮತ್ತು ಕರ್ನಾಟಕಗಳ ನಡುವೆ ಅನೇಕ ಬಗೆಹರಿಯದ ವಿವಾದಗಳಿವೆ. ಈ ಪ್ರತಿಮೆಗಳ ಅನಾವರಣದ ಸಂದರ್ಭದಲ್ಲಿ ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಎಲ್ಲ ವಿವಾದಗಳನ್ನು ಮಾತುಕತೆಯ ಮೂಲಕವೇ ಪರಿಹರಿಸಿಕೊಳ್ಳುವೆವು ಎಂದರು. ಸಂತರು ತೋರಿಸಿದ ಮಾರ್ಗದಲ್ಲಿ ನಡೆದರೆ ವಿವಾದಗಳೇ ಇರುವುದಿಲ್ಲ, ಅಲ್ಲವೇ?**

ಸರ್ವಜ್ಞ ಮತ್ತು ತಿರುವಳ್ಳುವರ್‌ರವರ ತ್ರಿಪದಿ-ದ್ವಿಪದಿಗಳನ್ನು ಸಂಗ್ರಹಿಸಿ ಕಳುಹಿಸಿಕೊಡಿ.

## ನಾದಗಂಗೆ ನಿರಂತರ



1924ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಿತು. ಆಗ ಹನ್ನೊಂದು ವರ್ಷದ ಗಂಗೂಬಾಯಿ ಅಲ್ಲಿ ವಂದೇಮಾತರಂ ಹಾಗೂ ಇತರ ಹಾಡುಗಳನ್ನು ಹಾಡಿ ಎಲ್ಲರ ಮೆಚ್ಚುಗೆ ಪಡೆದರು.

ಯಾರು ತಾನೆ ಗಂಗೂಬಾಯಿ ಹಾನಗಲ್ ಹೆಸರು ಕೇಳಿಲ್ಲ? ಇದೇ ವರ್ಷ ಜುಲೈ 21ರಂದು ಅಸುನೀಗಿದ ಗಂಗೂಬಾಯಿಯವರು ಹಿಂದುಸ್ತಾನಿ ಸಂಗೀತ ಕ್ಷೇತ್ರದ ಬಹುದೊಡ್ಡ ಹೆಸರು. 97 ವರ್ಷ ಬದುಕಿದ್ದ ಅವರು ಜೀವಿತ ಕಾಲದಲ್ಲಿಯೇ ದಂತಕಥೆಯಾಗಿದ್ದರು. 1913ರ ಮಾರ್ಚ್ 5ರಂದು ಧಾರವಾಡದಲ್ಲಿ ಜನಿಸಿದ ಗಂಗಜ್ಜಿ, ತಾಯಿ ಅಂಬಾಬಾಯಿಯವರಿಂದಲೇ ಸಂಗೀತ ಪಾಠ ಆರಂಭಿಸಿದರು.

ಹಿಂದೂಸ್ತಾನಿ ಸಂಗೀತದಲ್ಲಿ ಅನೇಕ ಪದ್ಧತಿಗಳಿವೆ. ಅವನ್ನು ಘರಾಣಾ ಅನ್ನುತ್ತಾರೆ. ಗಂಗೂಬಾಯಿಯವರು ಕಿರಾಣಾ ಘರಾಣಾ ಎಂಬ ಸಂಗಿತ ಪರಂಪರೆಗೆ ಸೇರಿದವರು. 'ಸವಾಯಿ ಗಂಧರ್ವ' ಎಂಬ ಪ್ರಸಿದ್ಧ ಸಂಗೀತಗಾರರು ಅವರ ಗುರು. ಹುಬ್ಬಳ್ಳಿಯಲ್ಲಿ ವಾಸಿಸುತ್ತಿದ್ದ ಅವರು ಅಲ್ಲಿನ ಎಲ್ಲರಿಗೂ ಹಿರಿಯಜ್ಜಿಯಂತಿದ್ದರು. ಇಡೀ ಭಾರತದಲ್ಲಿ ಅವರ ಬಗ್ಗೆ ಬಹಳ ಗೌರವ. ರಾಷ್ಟ್ರಪತಿಗಳಿಂದ ಹಿಡಿದು ಜನಸಾಮಾನ್ಯರವರೆಗೆ ಎಲ್ಲರೂ ಅವರನ್ನು ಬಹಳ ಪೂಜ್ಯ ಭಾವನೆಯಿಂದ ನೋಡುತ್ತಿದ್ದರು. ಅವರಿಗೆ ಪದ್ಮವಿಭೂಷಣ ಸೇರಿದಂತೆ ಅನೇಕ ಪ್ರಶಸ್ತಿಗಳು ಬಂದಿದ್ದವು.

ಮಕ್ಕಳೇ, ಗಂಗೂಬಾಯಿಯವರು ಅಷ್ಟು ದೊಡ್ಡ ಸಂಗೀತಗಾರರಾಗಿದ್ದು ಹೇಗೆ ಗೊತ್ತೆ? ಚಿಕ್ಕ ವಯಸ್ಸಿನಿಂದಲೇ ಸತತ ಸಂಗೀತ ಸಾಧನೆ ಮಾಡಿದ್ದರಿಂದ ಅದು ಸಾಧ್ಯವಾಯಿತು. ನಿರಂತರ ಪ್ರಯತ್ನವಿಲ್ಲದೆ ಯಾವ ವಿದ್ಯೆಯೂ ವಶವಾಗುವುದಿಲ್ಲ. ಗಂಗೂಬಾಯಿಯವರಂತೆ ಒಂದೇ ಮನಸ್ಸಿನಿಂದ ನಿಮ್ಮ ಆಯ್ಕೆಯ ಕ್ಷೇತ್ರದಲ್ಲಿ ಹಗಲಿರುಳು ಪರಿಶ್ರಮಪಟ್ಟರೆ ನೀವೂ ಅವರಂತೆ ಬಹು ದೊಡ್ಡ ಸಾಧಕರಾಗಬಹುದು, ಹೆಸರು ಗಳಿಸಬಹುದು.

ಗುರುಗಳ ಹಾಡುಗಾರಿಕೆಯ ಶೈಲಿಯನ್ನು ಸ್ವಲ್ಪವೂ ತಪ್ಪದೇ ಅನುಸರಿಸುತ್ತಿದ್ದರು ಗಂಗೂಬಾಯಿ.

## ದೇಶಕ್ಕಾಗಿ ದುಡಿದ ಮಹಾನ್ ವಿಜ್ಞಾನಿ

ವ್ಯಕ್ತಿಚಿತ್ರ



ಡಾ. ವಿಕ್ರಮ್ ಸಾರಾಭಾಯ್

'ಚಂದ್ರಯಾನ'ದ ಯಶಸ್ಸಿನ ನಂತರ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಭಾರತ ಜಗತ್ತಿನ ಅಗ್ರಗಣ್ಯ ದೇಶಗಳ ಸಾಲಿಗೆ ಸೇರಿದೆ. ಇಷ್ಟೆಲ್ಲ ಪ್ರಗತಿ ಸಾಧಿಸಲು ಭದ್ರವಾದ ಅಡಿಪಾಯ ಹಾಕಿದವರು ಡಾ. ವಿಕ್ರಮ್ ಸಾರಾಭಾಯ್. ಅವರನ್ನು ಭಾರತದ 'ಬಾಹ್ಯಾಕಾಶ ಕಾರ್ಯಕ್ರಮಗಳ ಜನಕ' ಎಂದು ಕರೆಯುತ್ತಾರೆ.

ಸಾರಾಭಾಯ್ ಅವರು ಹುಟ್ಟಿದ್ದು 1919ರ ಆಗಸ್ಟ್ 21ರಂದು, ಅಹಮದಾಬಾದ್‌ನಲ್ಲಿ. ನಮ್ಮ ದೇಶ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವದ ಬೇರೆ ಯಾವ ರಾಷ್ಟ್ರಕ್ಕಿಂತಲೂ ಕೀಳಾಗಿರಬಾರದು ಎನ್ನುವುದು ಅವರ ಆಶಯವಾಗಿತ್ತು. ವಿದೇಶದಲ್ಲಿನ ಐಶಾರಾಮಿ ಸೌಲಭ್ಯಗಳನ್ನು ಬಿಟ್ಟು ಭಾರತಕ್ಕೆ ಮರಳಿದ ಅವರು 'ಇಸ್ರೋ' ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕೇರಳದ 'ತುಂಬಾ' ಎನ್ನುವ ಹಳ್ಳಿಯಲ್ಲಿ ಭಾರತದ ಮೊತ್ತಮೊದಲ ರಾಕೆಟ್ ಉಡಾವಣೆ ಕೇಂದ್ರವನ್ನು ಸ್ಥಾಪಿಸಿದರು. ನಮ್ಮ ದೇಶದ ಮೊದಲನೆಯ ಉಪಗ್ರಹದ ನಿರ್ಮಾಣ ಹಾಗೂ ಉಡಾವಣೆಯ ಯೋಜನೆ ರೂಪಿಸಿದ್ದೂ ಅವರೇ. ಉಪಗ್ರಹಗಳನ್ನು ಬಳಸಿ ಗ್ರಾಮೀಣ ಪ್ರದೇಶಗಳಲ್ಲೂ ಒಳ್ಳೆಯ ಶಿಕ್ಷಣ ದೊರಕಿಸಬಹುದು ಎನ್ನುವುದು ಸಾರಾಭಾಯ್ ಅವರ ಪರಿಕಲ್ಪನೆ. ಇದರಿಂದಾಗಿ ದೂರದರ್ಶನದ ಮೂಲಕ ನಮ್ಮ ಹಳ್ಳಿಗಳ ಲಕ್ಷಾಂತರ ಜನರು ಶಿಕ್ಷಣ ಪಡೆಯಲು ಸಾಧ್ಯವಾಯಿತು.

ಶಾಂತಿಸ್ವರೂಪ್ ಭಟ್ನಾಗರ್ ಪ್ರಶಸ್ತಿ, ಪದ್ಮಭೂಷಣ, ಪದ್ಮವಿಭೂಷಣ (ಮರಣೋತ್ತರ) ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದರು. 1971ರ ಡಿಸೆಂಬರ್ 31ರಂದು ತಮ್ಮ 52ನೇ ವಯಸ್ಸಿನಲ್ಲಿ ನಿಧನರಾದರು.



ಮಕ್ಕಳೇ, 2008ರ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಪಡೆದಿದ್ದ ಭಾರತದ ಹೆಮ್ಮೆಯ ಬಾಕ್ಸರ್ ವಿಜಯೇಂದರ್ ಈಗ ವಿಶ್ವದ ಎರಡನೇ ಅತಿ ಶ್ರೇಷ್ಠ ಬಾಕ್ಸರ್ (ಮುಷ್ಟಿಯುದ್ಧ ಪಟು) ಆಗಿದ್ದಾರೆ.

**ನಿಮಗಿದು ಗೊತ್ತೇ?**



ಭಾರತದಲ್ಲಿ 5000 ಕ್ಕೂ ಹೆಚ್ಚು ದಿನಪತ್ರಿಕೆಗಳು, 16,000ಕ್ಕೂ ಹೆಚ್ಚು ವಾರಪತ್ರಿಕೆಗಳು, 6000 ಕ್ಕೂ ಹೆಚ್ಚು ಪಾಕ್ಷಿಕ ಪತ್ರಿಕೆಗಳೂ ಇವೆ ಎಂದು ಒಂದು ಅಂಕಿ-ಅಂಶ ತಿಳಿಸುತ್ತದೆ. ಇವುಗಳಲ್ಲಿ ಭಾರತದ ಎಲ್ಲ ಭಾಷೆಗಳ ಪತ್ರಿಕೆಗಳು ಸೇರಿವೆ. 'ಚಿಣ್ಣರ ಚೇತನ'ವು ಶಾಲಾಮಕ್ಕಳಿಗಾಗಿ ರಚಿತವಾದ ಪ್ರಥಮ ಗೋಡೆಪತ್ರಿಕೆ.

---

> ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
> ತನ್ನಂತೆ ಪರರ ಬಗೆದೊಡೆ- ಕೈಲಾಸ ಬಿನ್ನಾಣವಕ್ಕು ಸರ್ವಜ್ಞ

ನಾವು ಎಲ್ಲರೊಡನೆ ಸುಖದುಃಖಗಳನ್ನು ಹಂಚಿಕೊಂಡು ಬಾಳಬೇಕು. ಹಸಿದವನಿಗೆ ಅನ್ನ ನೀಡುವುದು ನಮ್ಮ ಕರ್ತವ್ಯ. 'ನನ್ನಿ' ಎಂದರೆ ಸತ್ಯ. ಯಾವಾಗಲೂ ಸತ್ಯವನ್ನೇ ನುಡಿಯಬೇಕು. ಇದೇ ಪ್ರಾಮಾಣಿಕತೆಯ ಲಕ್ಷಣ. ಪ್ರಪಂಚದಲ್ಲಿರುವ ಎಲ್ಲ ಜೀವಿಗಳಿಗೂ ತನ್ನಂತೆಯೇ ಬದುಕುವ ಹಕ್ಕಿದೆ. ತಾನೂ ಬದುಕಿ ಇತರರಿಗೂ ಬಾಳಲು ಬಿಡಬೇಕು ಎಂದು ಸರ್ವಜ್ಞನ ಈ ತ್ರಿಪದಿ ಹೇಳುತ್ತದೆ.

## ಸುದ್ದಿ ಸಾರ

### ನ್ಯಾನೋ ಕಾರು ಮಾರುಕಟ್ಟೆಗೆ



ಬಹು ನಿರೀಕ್ಷಿತ ಟಾಟಾ ನ್ಯಾನೋ ಕಾರ್ ಮಾರುಕಟ್ಟೆಗೆ ಇದೇ ಜುಲೈನಲ್ಲಿ ಬಿಡುಗಡೆಯಾಗಿದೆ. ಇದು ಈವರೆಗಿನ ಕಾರುಗಳ ಪೈಕಿ ಅತ್ಯಂತ ಕಡಿಮೆ ದರದ್ದಾಗಿದೆ. ಇದರ ಬೆಲೆ ಸುಮಾರು ರೂ. 1 ಲಕ್ಷ.

### ಡಾ॥ ಅಬ್ದುಲ್ ಕಲಾಂರ ಡ್ರೈವರ್ ಕದಿರೇಶನ್ ಈಗ ಕಾಲೇಜು ಶಿಕ್ಷಕ



ಕದಿರೇಶನ್ ಎಸ್.ಎಸ್.ಎಲ್.ಸಿ. ಕೂಡ ಕಲಿತಿರಲಿಲ್ಲ. ಮಾಜಿ ರಾಷ್ಟ್ರಪತಿ ಡಾ॥ ಅಬ್ದುಲ್ ಕಲಾಂ ಅವರ ಕಾರಿನ ಚಾಲಕನಾಗಿದ್ದ, ಕದಿರೇಶನ್ ಡಾ॥ ಕಲಾಂರ ಪ್ರೇರಣೆಯಿಂದ ವಿದ್ಯಾಭ್ಯಾಸದಲ್ಲಿ ತೊಡಗಿ ಇದೀಗ ಅರೈನಾರ್ ಅಣ್ಣಾ ಸರ್ಕಾರಿ ಕಲಾ ಕಾಲೇಜಿನಲ್ಲಿ ಇತಿಹಾಸದ ಪ್ರಾಧ್ಯಾಪಕ.

### ದೇಶದ ಮೇಲೆ ಬರದ ಛಾಯೆ – ಬೆಲೆ ಏರಿಕೆ ಬಿಸಿ



ಕರ್ನಾಟಕವು ಸೇರಿದಂತೆ ದೇಶದ 246 ಜಿಲ್ಲೆಗಳಲ್ಲಿ ಬರಗಾಲದ ಪರಿಸ್ಥಿತಿ ಎದುರಾಗಿದೆ. ಜೀವನಾವಶ್ಯಕ ಹಾಗೂ ಆಹಾರ ಧಾನ್ಯಗಳ ಬೆಲೆಗಳಲ್ಲಿ ಭಾರೀ ಹೆಚ್ಚಳದಿಂದ ತೊಂದರೆಗೀಡಾಗಿರುವ ಜನತೆ ಈಗ ಬರಗಾಲವನ್ನು ಎದುರಿಸಬೇಕಾಗಿದೆ.

### ಹಂದಿ ಜ್ವರ



ದೇಶದಲ್ಲೀಗ ವಿದೇಶದಿಂದ ಬಂದ ಹಂದಿಜ್ವರ(H1N1)ದ್ದೆ ಸುದ್ದಿ. ಮಹಾರಾಷ್ಟ್ರ, ಕರ್ನಾಟಕ, ಗುಜರಾತ್, ದೆಹಲಿ, ತಮಿಳುನಾಡು, ಕೇರಳ, ಛತ್ತೀಸ್‌ಗಡಗಳಲ್ಲಿ ಹಂದಿಜ್ವರದ ಸೋಂಕು ಪತ್ತೆಯಾಗಿದೆ. ಪರಿಸ್ಥಿತಿ ಎದುರಿಸಲು ಸರ್ಕಾರ ಎಲ್ಲಾ ಕ್ರಮ ಕೈಗೊಂಡಿದೆ.

### ಬೌಂಡರಿ ಲೈನ್



"ಕ್ರಿಕೆಟ್‌ನಲ್ಲಿ ವೇಗದ ಬೌಲಿಂಗ್ ಮಾಡುವ (ಗಂಟೆಗೆ 90 ಕಿಲೋಮೀಟರ್ ವೇಗ) ಕ್ರಿಕೆಟ್ ಪಟು ಎದುರಾಳಿಯನ್ನು ಔಟ್ ಮಾಡಲು ಆಗದಿರಬಹುದು, ಆದರೆ ನಾವು ಎದುರು ಇರುವವರ ಮೇಲೆ ಕೆಮ್ಮಿದರೆ/ಸೀನಿದರೆ (ಗಂಟೆಗೆ 166 ಕಿಲೋಮೀಟರ್ ವೇಗ) ಅವರಿಗೆ ಖಂಡಿತ ಖಾಯಿಲೆ ಬಂದು ಔಟಾಗುತ್ತಾರೆ!"

## ಪದ ಮಂಜರಿ

ಕನ್ನಡದ ಪದಗಳಲ್ಲಿ ಒಂದು ಸ್ವರದ ಬದಲಿಗೆ ಇನ್ನೊಂದು ಬಳಸಿದರೆ ಅರ್ಥ ಎಷ್ಟೊಂದು ವ್ಯತ್ಯಾಸ ಆಗುತ್ತದೆ ಎಂಬುದಕ್ಕೆ ಇಗೋ ಇಲ್ಲಿದೆ ನೋಡಿ ಉದಾಹರಣೆಗಳು.. ಓದಿ, ವ್ಯತ್ಯಾಸ ತಿಳಿದುಕೊಳ್ಳಿ.

| | | | |
|---|---|---|---|
| ಅಳು-ಆಳು | ಬಳೆ-ಬಾಳೆ | ಸರ-ಸಾರ | ಕವಿ-ಕಾವಿ |
| ಒಲೆ-ಓಲೆ | ಮರಿ-ಮಾರಿ | ವರ-ವಾರ | ಅಗಸ-ಆಗಸ |
| ಕೊರೆ-ಕೋರೆ | ಅಡಿ-ಆಡಿ | ದನ-ದಾನ | ಬೆಳೆ-ಬೇಳೆ |

ಮಕ್ಕಳೇ, ನೀವು ಇಂತಹ 20 ಜೋಡಿ ಪದಗಳನ್ನು ಬರೆದು ನಮಗೆ ಕಳುಹಿಸಿ


ನಿಮ್ಮ ಅಭಿಪ್ರಾಯ ಹಾಗು ಅನಿಸಿಕೆಗಳನ್ನು ಈ ವಿಳಾಸಕ್ಕೆ ಪತ್ರದ ಮೂಲಕ ತಿಳಿಸಿ
ಸಂಪಾದಕರು, ಚಿಣ್ಣರ ಚೇತನ ಗೋಡೆ ಪತ್ರಿಕೆ, ಅದಮ್ಯ ಚೇತನ
ಅನ್ನಪೂರ್ಣ,ಸಮುದಾಯ ಭವನ, ಕೆಂಪೇಗೌಡನಗರ, ಬೆಂಗಳೂರು 560019.



ಸರ್ವ ಶಿಕ್ಷಣ ಅಭಿಯಾನ ಮಿಷನ್, ಬೆಂಗಳೂರು

ಸರ್ವ ಶಿಕ್ಷಣ ಅಭಿಯಾನ – ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಅದಮ್ಯ ಚೇತನ, ಬೆಂಗಳೂರು

ಚಿಣ್ಣರ ಚೇತನ – ಶಾಲಾ ಮಕ್ಕಳ ಗೋಡೆ ಪತ್ರಿಕೆ : ಕರ್ನಾಟಕ ಸರ್ಕಾರ, ಸರ್ವ ಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ, ಬೆಂಗಳೂರು ಇವರ ಸಹಭಾಗಿತ್ವದಲ್ಲಿ ವಿನ್ಯಾಸಗೊಳಿಸಿ ಪ್ರಕಾಶಿಸಿದೆ.



ಹಕ್ಕುಗಳನ್ನು ಕಾದಿರಿಸಲಾಗಿದೆ.